ಭೂಮಾಲೀಕ ಶೂದ್ರಜಾತಿಗಳಲ್ಲಿ ಒಂದು ಬಗೆಯ ಅಳುಕನ್ನೂ ಹುಟ್ಟಿಸಿತ್ತು. ಬಸವಲಿಂಗಪ್ಪನವರು ಹೇಳಿದ್ದು ಬ್ರಾಹ್ಮಣರಿಗೆ ಆಳದಲ್ಲಿ ಸಮರ್ಪಕವೆನಿಸಿತ್ತು. ಆದರೆ, ಮೇಲುಗಡೆ ತಮ್ಮ ಅತೃಪ್ತಿಯನ್ನು ವ್ಯಕ್ತಪಡಿಸುತ್ತಿದ್ದರು. ಹೀಗಾಗಿ ತರಲೆ ಮಾಡಲು ಕಾದುಕೊಂಡಿದ್ದ ಬ್ರಾಹ್ಮಣರೂ, ಒಂದು ರೀತಿಯ ಆತಂಕದ ಸ್ಥಿತಿಯಲ್ಲಿದ್ದ ಹಿಂದುಳಿದವರೂ ಒಂದಾಗಿ ದಲಿತರ ವಿರುದ್ಧ ಸಮರ ಸಾರಿದರು.'

## ಭಾಷಿಕ ರಾಜಕಾರಣ

ಬೂಸಾ ಪ್ರಕರಣದಲ್ಲಿ ಕನ್ನಡ, ಇಂಗ್ಲಿಷ್, ಸಂಸ್ಕೃತ ಭಾಷೆಗಳು ವಹಿಸಿದ ಪಾತ್ರವು ಸ್ವಾರಸ್ಯಕರವಾಗಿದೆ. ಬಿಬಿಯವರು ಭಾಷಣ ಮಾಡಿದ ವೇದಿಕೆಯ ಹೆಸರು ('ಅಂಬೇಡ್ಕರ್ ಸ್ಕೂಲ್ ಆಫ್ ಥಾಟ್ಸ್') ಇಡಿಯಾಗಿ ಆಂಗ್ಲಮಯವಾಗಿತ್ತು; ಇದಕ್ಕೆ ತಕ್ಕಂತೆ ಸಂಜೀವಯ್ಯನವರೂ ಇಂಗ್ಲಿಷಿನಲ್ಲೇ ಮಾತಾಡಿದ್ದರು. ಆಗ ಬಿಬಿಯವರು ಇಂಗ್ಲಿಷಿನ ಮಹತ್ವವನ್ನು ಸಭೆಗೆ ತಿಳಿಸಿಹೇಳುವ ಪ್ರಸಂಗವು, ತಾತ್ವಿಕವಾಗಿ ಕುವೆಂಪು ಅವರ 'ಇಂಗ್ಲಿಷರು ಭಾರತಕ್ಕೆ ಬಾರದಿದ್ದರೆ ನಾನು ಹಾರವರ ಮನೆಯಲ್ಲಿ ಸಗಣಿ ಬಾಚಿಕೊಂಡು ಇರಬೇಕಾಗಿತ್ತು' ಎಂಬ ಹೇಳಿಕೆಗೂ, 'ನಮಗೆ ಬೇಕಾದ ಇಂಗ್ಲಿಷ್' ಲೇಖನಕ್ಕೂ ಸಮೀಪವಿರುವುದು ಗಮನಾರ್ಹ. ಈ ಎಲ್ಲ ಪ್ರಕರಣಗಳಲ್ಲಿ ಇಂಗ್ಲಿಷೆನ್ನುವುದು ಪಾಶ್ಚಿಮಾತ್ಯ ಆಧುನಿಕತೆ, ವಿಜ್ಞಾನ ಮತ್ತು ವೈಚಾರಿಕತೆಯ ಸಂಕೇತವಾಗಿದೆ. ಭಾರತದ ದಲಿತ ಮತ್ತು ಕೆಳಜಾತಿಯ ಚಿಂತಕರು ಸಾಮಾನ್ಯವಾಗಿ ದೇಶೀಭಾಷೆ, ದೇಶೀಸಾಹಿತ್ಯ, ಧರ್ಮ, ದೇಶೀಸಂಸ್ಕೃತಿ, ನಮ್ಮ ಪರಂಪರೆ ಮುಂತಾದ ಭಾವನಾತ್ಮಕ ಪರಿಕಲ್ಪನೆಗಳ ಬಗ್ಗೆ – ಅವುಗಳೊಳಗೆ ತಮ್ಮನ್ನು ಬಂಧಿಸುವ ಅದೃಶ್ಯವಾದ ಸಾಮಾಜಿಕ ತತ್ವಗಳಿರಬಹುದೆಂದು – ಶಂಕಿಸುತ್ತಾರೆ. ಸಾಂಪ್ರದಾಯಿಕ ಸಮಾಜದ ಸಂಕಲೆಗಳಿಂದ ಬಿಡುಗಡೆ ಪಡೆಯಲು ಇಂಗ್ಲಿಷು, ಆಧುನಿಕತೆ, ವೈಚಾರಿಕತೆಗಳನ್ನು ನೆರವಾಗುತ್ತವೆ ಎಂದೂ ಪರಿಭಾವಿಸುತ್ತಾರೆ. ಅಂಬೇಡ್ಕರ್ ಮೊದಲುಗೊಂಡು ಈಚಿನ ಕಾಂಚ ಐಲಯ್ಯ, ಚಂದ್ರಭಾನ್ ಪ್ರಸಾದ್ ತನಕ ಈ ಚಿಂತನೆಯನ್ನು ಕಾಣಬಹುದು.

ವಿಶೇಷವೆಂದರೆ, ಬೂಸಾ ಪ್ರಕರಣಕ್ಕೆ ಉತ್ತರ ಕರ್ನಾಟಕ ಮತ್ತು ಕರಾವಳಿಗೆ ಹೋಲಿಸಿದರೆ, ಹಳೇಮೈಸೂರು ಭಾಗದಿಂದ ಹೆಚ್ಚು ಪ್ರತಿರೋಧ ಬಂದಿದ್ದು. ಬೇರೆ ಪ್ರದೇಶಗಳಿಗೆ ಹೋಲಿಸಿದರೆ ಇದು ಕನ್ನಡವೇ ಪ್ರಧಾನವಾದ ಮನೆಮಾತು ಮತ್ತು ಅಸ್ಮಿತೆ ಆಗಿರುವ ಪ್ರದೇಶ. ಇದಕ್ಕೆ ಪೂರಕವಾಗಿ ಬೂಸಾ ಗಲಭೆಗಳ ಹಿಂದೆ ಮಂತ್ರಿಗಳಾದ ಹುಚ್ಚಮಾಸ್ತಿ ಗೌಡ ಹಾಗೂ ಎಚ್.ಕೆ. ಪಾಟೀಲರು ಇದ್ದರೆಂಬ ಪುಕಾರಿತ್ತು. ದಲಿತ ಚಳವಳಿಗಾರರು ಇವರ ಪ್ರತಿಕೃತಿಗಳನ್ನು ದಹಿಸಿದ್ದರು ಕೂಡ. ಬೂಸಾ ಹೇಳಿಕೆ ಖಂಡಿಸುವಲ್ಲಿ ಒಕ್ಕಲಿಗ ಸಮುದಾಯದಿಂದ ಬಂದ ಇಬ್ಬರು ಲೇಖಕರು ಮುಂಚೂಣಿಯಲ್ಲಿದ್ದರು. ಸಮಸ್ಯೆಯೆಂದರೆ, ಇವರು ಬೂಸಾ ಹೇಳಿಕೆಯನ್ನು ಅದರ ಮುಖಬೆಲೆಯಲ್ಲಿ ಗ್ರಹಿಸಿದ್ದು; ಅದರೊಳಗೆ ಹುದುಗಿದ್ದ ದಲಿತರ ವೇದನೆ, ಸಿಟ್ಟು ಮತ್ತು ಆಶೋತ್ತರಗಳನ್ನು ಅರ್ಥಮಾಡಿಕೊಳ್ಳದೆ ಹೋಗಿದ್ದು. ಭೂಮಾಲೀಕರಾದ ಮಧ್ಯಮಸ್ತರದ ಜಾತಿಗೆ ಸೇರಿದ ಶೂದ್ರ ವೈಚಾರಿಕತೆಯಲ್ಲಿರುವ ಅಂತರ್ಗತ ಸಮಸ್ಯೆ ಇದಾಗಿತ್ತು. ಇದು ಬ್ರಾಹ್ಮಣರ ಸಾಂಸ್ಕೃತಿಕ ಯಜಮಾನಿಕೆ ವಿರೋಧಿಸುವಷ್ಟು ತೀವ್ರತೆಯಲ್ಲಿ ಕೆಳಸ್ತರದ ಜಾತಿಗಳ ಹಾಗೂ ಸ್ತ್ರೀಯರ ಆಶೋತ್ತರಗಳ ಬಗ್ಗೆ ಸೂಕ್ಷ್ಮವಾಗಿ ಇರುವುದಿಲ್ಲ. ಹೀಗಾಗಿಯೇ 'ಹೊಸ ಅಲೆಗಳು' ಸಭೆಯಲ್ಲಿ ಕನ್ನಡ ಭಾಷಣಕ್ಕೆ ಒತ್ತಾಯಿಸಿದವರು ದಲಿತರಾದರೂ, ಬಿಬಿಯವರು ಕರ್ನಾಟಕ ಏಕೀಕರಣ ಸಮಿತಿಯಲ್ಲಿ ದುಡಿದವರಾದರೂ, 'ಕನ್ನಡ ವಿರೋಧಿ'ಗಳು ಎಂಬ ಆಪಾದನೆಗೆ ಒಳಗಾಗಬೇಕಾಯಿತು.

ಬಿಬಿಯವರು ತಮ್ಮ ಭಾಷಣಗಳಲ್ಲಿ ಜನರಿಗೆ ಅರ್ಥವಾಗುವಂತೆ ಬರೆದ ಬಸವಣ್ಣ ಹಾಗೂ ಸರ್ವಜ್ಞರನ್ನು ಸಮ್ಮತಿಯಿಂದಲೂ, ಅರ್ಥವಾಗದ ಸಂಸ್ಕೃತ ಕವಿಗಳನ್ನು ವಿರೋಧದಲ್ಲೂ